# ಕರ್ನಾಟಕ ವಿಧಾನ ಪರಿಷತ್ತು

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಸ್.ಎಲ್. ಭೋಜೇಗೌಡ ಇವರು ನಿಯಮ 330 ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ

**ವಿಷಯ:**

ಮಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್ (MSCL) ಈಗಾಗಲೇ ಹಲವಾರು ರಸ್ತೆಗಳು, ಫುಟ್‌ಪಾತ್‌ಗಳು, ಉದ್ಯಾನವನಗಳು, ಕೆರೆಗಳು, ಸ್ಮಾರ್ಟ್ ಬಸ್ ನಿಲ್ದಾಣಗಳು, ಇ-ಶೌಚಾಲಯಗಳು ಇತ್ಯಾದಿ ಅವೈಜ್ಞಾನಿಕ ಮತ್ತು ಕಳಪೆ ಕಾಮಗಾರಿಗಳಿಂದ ತೆರಿಗೆದಾರರ ಕೋಟಿಗಟ್ಟಲೆ ಹಣವನ್ನು ವ್ಯರ್ಥ ಮಾಡಿರುತ್ತದೆ. ವಾಸ್ತವವಾಗಿ, MSCL ನಿಂದ ಕೈಗೊಂಡ ಹಲವಾರು ಯೋಜನೆಗಳು ಇಲ್ಲಿಯವರೆಗೆ ಅಪೂರ್ಣವಾಗಿದೆ. ಇದರ ಮುಂದುವರೆದ ಭಾಗವಾಗಿ MSCL ನೇತ್ರಾವತಿ ರಿವರ್‌ಫ್ರಂಟ್ (ಜಲಾಭಿಮುಖ) ಯೋಜನೆ ಎಂಬ ನಕಲಿ ಯೋಜನೆಯನ್ನು ಕಾರ್ಯಗತಗೊಳಿಸುತ್ತಿದೆ. ಈ ಯೋಜನೆಯು ನೇತ್ರಾವತಿ ರೈಲ್ವೆ ಸೇತುವೆಯಿಂದ ಬೋಳಾರ ಸಿ ಫೇಸ್ ಕೇವಲ 2.1 ಕಿ.ಮೀಗೆ 70 ಕೋಟಿ ರೂಪಾಯಿ ವೆಚ್ಚದಲ್ಲಿ ಸೈಕಲ್ ಟ್ರ್ಯಾಕ್ ಮತ್ತು ವಾಕಿಂಗ್ ಟ್ರ್ಯಾಕ್ ಅನ್ನು ನಿರ್ಮಿಸುತ್ತಿದೆ. ಈ ಟ್ರ್ಯಾಕ್ ಗಳಿಗೆ ಸಾರ್ವಜನಿಕ ಸಂಪರ್ಕ ರಸ್ತೆ ಕಲ್ಪಿಸದಿದ್ದರೂ, MSCLನ ಅಧಿಕಾರಿಗಳ ಪ್ರಕಾರ ಈ ಯೋಜನೆಯಲ್ಲಿ ಉದ್ಯಾನವನ, ಜಿಮ್, ಬಗ್ಗಿಪಾಯಿಂಟ್, ಸೈಕಲ್ ಸ್ಟ್ಯಾಂಡ್ ಇತರ ಸೌಕರ್ಯಗಳನ್ನು ಸ್ಥಾಪಿಸುವ ಯೋಜನೆ ಇದೆ ಎಂದು ಹೇಳುತ್ತಾರೆ. ಈ ಯೋಜನೆಯು ತರಾತುರಿಯಲ್ಲಿ ಕೈಗೊಂಡು, ಕಾರ್ಯಗತಗೊಳ್ಳುತ್ತಿರುವ ರೀತಿ ನೋಡಿದರೆ, ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟಾಗುವುದರಲ್ಲಿ ಯಾವುದೇ ಅನುಮಾನವಿಲ್ಲ. ಈ ಸಂಬಂಧ ಮಂಗಳೂರು ಸ್ಮಾರ್ಟ್ ಸಿಟಿ ಕಂಪನಿ ಕೈಗೊಂಡ ನೇತ್ರಾವತಿ ವಾಟರ್‌ಫ್ರಂಟ್ (ಜಲಾಭಿಮುಖ) ಯೋಜನೆಯಲ್ಲಿ ಅಕ್ರಮಗಳು ಮತ್ತು ಕಾರ್ಯವಿಧಾನದ ಲೋಪಗಳಿಂದ ಸ್ಥಳೀಯರ ಜೀವನೋಪಾಯದ ಮೇಲೆ ಪರಿಣಾಮ ಬೀರುವ ಕುಂದು ಕೊರತೆಗಳನ್ನು ಪರಿಹರಿಸುವಲ್ಲಿ ವಿಫಲರಾಗಿರುವ ಸಂಬಂಧ ನಿಯಮ 330 ರಡಿಯಲ್ಲಿ ಸರ್ಕಾರದ ಗಮನ ಸೆಳೆದಿರುವ ಬಗ್ಗೆ

**ಉತ್ತರ:**

- ಸ್ಮಾರ್ಟ್ ಸಿಟಿ ಅಭಿಯಾನದ ಮಾರ್ಗಸೂಚಿ ಅನುಸಾರ ನಗರಗಳ ಆಯ್ಕೆಯ ಹಂತದಲ್ಲಿ ಸ್ಮಾರ್ಟ್ ಸಿಟಿ ಪ್ರಸ್ತಾವನೆ(Smart City Proposal-SCP)ಗಳನ್ನು ಸಿದ್ಧಪಡಿಸಬೇಕಾಗಿದ್ದು, SCPಯು ಆಯಾ ನಗರದ ಮೂಲಸೌಕರ್ಯ ಸೌಲಭ್ಯಗಳ ಉನ್ನತೀಕರಣ, ನಾಗರಿಕರ ಜೀವನಮಟ್ಟ ಸುಧಾರಣೆ, ಸ್ವಚ್ಛ ಮತ್ತು ಸುಸ್ಥಿರ ಪರಿಸರಕ್ಕೆ ಉತ್ತೇಜನ ನೀಡುವ ಹಲವಾರು ಅಂಶಗಳನ್ನು ಒಳಗೊಂಡಿರಬೇಕಾಗಿರುತ್ತದೆ. ಅದರಂತೆ ಮಂಗಳೂರು ನಗರವು ಸಿದ್ಧಪಡಿಸಿದ SCPಯಲ್ಲಿ ನಗರದ ರಸ್ತೆಗಳ ಅಭಿವೃದ್ಧಿ, ಮೀನು ಮಾರುಕಟ್ಟೆ ಅಭಿವೃದ್ಧಿ, ಹಳೆಯ ಬಂದರು ಅಭಿವೃದ್ಧಿ, ವೆನ್‌ಲಾಕ್ ಆಸ್ಪತ್ರೆಯ ಅಭಿವೃದ್ಧಿ, ಸಮುದ್ರ ಕಿನಾರೆಯ ಪ್ರದೇಶಗಳ ಅಭಿವೃದ್ಧಿ, 24/7 ನೀರು ಸರಬರಾಜು ಯೋಜನೆಗೆ ನೆರವು ಮತ್ತು ತಂತ್ರಜ್ಞಾನ ಆಧಾರಿತ ಸಾರ್ವಜನಿಕ ಸೇವೆಗಳು ಹೀಗೆ ಹಲವಾರು ಅಂಶಗಳನ್ನು ಒಳಗೊಂಡ ಪ್ರಸ್ತಾವನೆಯನ್ನು ಸಿದ್ಧಪಡಿಸಿ. ಸದರಿ SCPಗೆ ಮಂಗಳೂರು ಮಹಾನಗರ ಪಾಲಿಕೆ ಹಾಗೂ ಸ್ಮಾರ್ಟ್ ಸಿಟಿ ಅಭಿಯಾನದ ರಾಜ್ಯ ಉನ್ನತ ಮಟ್ಟದ ಸಂಚಾಲನ ಸಮಿತಿಯಿಂದ ಅನುಮೋದನೆಗೊಂಡಿರುತ್ತದೆ. ಈ SCP ಆಧಾರದ, ಮಂಗಳೂರು ನಗರವು ಸ್ಮಾರ್ಟ್ ಸಿಟಿ ಅಭಿಯಾನದ 2ನೇ ಸುತ್ತಿನಲ್ಲಿ ದಿನಾಂಕ:03.10.2016ರಂದು ಸ್ಮಾರ್ಟ್‌ಸಿಟಿಯಾಗಿ ಆಯ್ಕೆಯಾಗಿರುತ್ತದೆ. ಯೋಜನೆಗಳ ಅನುಷ್ಠಾನಕ್ಕಾಗಿ ಮಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ಎಂಬ ವಿಶೇಷ ಉದ್ದೇಶಿತ ವಾಹನವನ್ನು ದಿನಾಂಕ:06.04.2017ರಂದು ಸ್ಥಾಪಿಸಲಾಗಿರುತ್ತದೆ

- ಸ್ಮಾರ್ಟ್‌ಸಿಟಿ ಅಭಿಯಾನದ ಮಾರ್ಗಸೂಚಿಯನ್ವಯ ಜಿಲ್ಲಾಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲೆ ರವರ ಅಧ್ಯಕ್ಷತೆಯಲ್ಲಿ ಮಾನ್ಯ ಲೋಕಸಭಾ ಸಂಸದರು, ಮಾನ್ಯ ಶಾಸಕರು ಮಂಗಳೂರು ಉತ್ತರ ಹಾಗೂ ದಕ್ಷಿಣ ವಿಧಾನಸಭಾ ಕ್ಷೇತ್ರ, ಮಹಾಪೌರರು ಮಂಗಳೂರು ಮಹಾನಗರ ಪಾಲಿಕೆ, ಆಯುಕ್ತರು ಮಂಗಳೂರು ಮಹಾನಗರ ಪಾಲಿಕೆ, ಆರ್ಥಿಕ ತಜ್ಞರು, ತಾಂತ್ರಿಕ ತಜ್ಞರು, ಕಾನೂನು ತಜ್ಞರು , ಸಂಬಂಧಿಸಿದ ಇಲಾಖೆಯ ಅಧಿಕಾರಿಗಳು ಹಾಗೂ ಸಂಬಂಧ ಪಟ್ಟ ವಿಷಯದ ವಿಶೇಷ ತಜ್ಞರೊಂದಿಗೆ (City Level Advisory Forum–CLAF) ಸಭೆಯಲ್ಲಿ ಸ್ಮಾರ್ಟ್‌ಸಿಟಿ ಕಾಮಗಾರಿಗಳ ಅನುಷ್ಠಾನದ ಕುರಿತು ಚರ್ಚಿಸಿ ಕ್ರಮಕೈಗೊಳ್ಳಲಾಗುತ್ತಿದೆ.
- ಯೋಜನೆಯ ಸಮರ್ಪಕ ಅನುಷ್ಠಾನಕ್ಕೆ ನಗರಾಭಿವೃದ್ಧಿ ಸಚಿವರು, ಜಿಲ್ಲಾ ಉಸ್ತುವಾರಿ ಸಚಿವರು, ಸಂಸದರು, ಶಾಸಕರು, ಮಹಾಪೌರರ ಅಧ್ಯಕ್ಷತೆಯಲ್ಲಿ ಪ್ರಗತಿ ಪರಿಶೀಲನಾ ಸಭಯನ್ನು ಕೈಗೊಳ್ಳಲಾಗುತ್ತಿದೆ.
- ಈ ನಿಟ್ಟಿನಲ್ಲಿ, ಮಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ವತಿಯಿಂದ ರೂ.923 ಕೋಟಿ ಮೌಲ್ಯದ 57 ಕಾಮಗಾರಿಗಳನ್ನು ಕೈಗೊಂಡಿದ್ದು, ಇವುಗಳ ಪೈಕಿ ರೂ.315.39 ಕೋಟಿ ಮೊತ್ತದ 34 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ. ಬಾಕಿ ರೂ.607.65 ಕೋಟಿ ಮೊತ್ತದ 23 ಕಾಮಗಾರಿಗಳು ಪ್ರಗತಿಯಲ್ಲಿದ್ದು, ಈ ಪೈಕಿ ರೂ.404.41 ಕೋಟಿ ಮೊತ್ತದ ಆರ್ಥಿಕ ಪ್ರಗತಿ ಸಾಧಿಸಲಾಗಿದೆ.
- ಮಂಗಳೂರು ನಗರವು ಸ್ಮಾರ್ಟ್‌ಸಿಟಿ ಅಭಿಯಾನದಡಿ ಆಯ್ಕೆಯಾಗಲು ಜಲಾಭಿಮುಖ ಪ್ರದೇಶ ಅಭಿವೃದ್ಧಿ ಯೋಜನೆಯು ಒಂದು ಮಹತ್ತರ ಪಾತ್ರ ವಹಿಸಿರುತ್ತದೆ. ಮಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ಕಾರ್ಯಾರಂಬಗೊಂಡ ನಂತರ ಈ ಯೋಜನೆಗೆ ವಿಸ್ತೃತ ಯೋಜನಾ ವರದಿ ತಯಾರಿಸಲು ನಗರದ ಸ್ಥಳೀಯರು, ಮೀನುಗಾರರು, ಟೈಲ್ ಫ್ಯಾಕ್ಟರಿ ಮಾಲೀಕರು, ಇತರ ವ್ಯಾಪಾರ ವಹಿವಾಟು ನಡೆಸುತ್ತಿರುವವರು, ಜನ ಪ್ರತಿನಿಧಿಗಳು, ಕೆನರಾ ಛೇಂಬರ್ ಆಫ್ ಕಾಮರ್ಸ್, ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮ ನಿಯಮಿತ, ಮೀನುಗಾರಿಕೆ ಕಾಲೇಜು, ಮಂಗಳೂರು, ಬಂದರು ಇಲಾಖೆ, ಮೀನುಗಾರಿಕೆ ಇಲಾಖೆ, ಪ್ರವಾಸೋದ್ಯಮ ಇಲಾಖೆ, ಭೂ ಸಮೀಕ್ಷೆ ಮತ್ತು ಭೂ ದಾಖಲೆ ಇಲಾಖೆ ,ಕಂದಾಯ ಇಲಾಖೆ, ಮಂಗಳೂರು ಮಹಾನಗರ ಪಾಲಿಕೆ ಅಧಿಕಾರಿಗಳು, ಸ್ಥಳೀಯ ಜನಪ್ರತಿನಿಧಿಗಳು, ಶಾಸಕರು, ಲೋಕಸಭಾ ಸದಸ್ಯರು, ಜಿಲ್ಲಾಡಳಿತದ ಅಧಿಕಾರಿಗಳೊಂದಿಗೆ ಚರ್ಚಿಸಿ ಸಲಹೆ ಹಾಗೂ ಸೂಚನೆಗಳನ್ನು ಗಣನೆಗೆ ತೆಗೆದುಕೊಂಡು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಹಾಗೂ ಅಧ್ಯಕ್ಷರು ಮಂಗಳೂರು ಸ್ಮಾರ್ಟ್ ಸಿಟಿ ಮಂಡಳಿ ಅವರ ಅಧ್ಯಕ್ಷತೆಯಲ್ಲಿ ಸಂಬಂಧಿಸಿದ ಇಲಾಖೆಗಳ ಸಭೆಗಳನ್ನು ನಡೆಸಿ, ಸ್ವೀಕರಿಸಿದ ಸಲಹೆ ಸೂಚನೆಗಳನ್ನು ಪರಿಗಣಿಸಿ ಜಲಾಭಿಮುಖ ಅಭಿವೃದ್ಧಿಗೆ ಮಹಾಯೋಜನೆ ಮತ್ತು ಉಪ ಯೋಜನೆಗಳನ್ನೊಳಗೊಂಡು ತಯಾರಿಸಿದ ಡಿಪಿಆರ್ ಪ್ರಕಾರ ವಾಟರ್‌ಫ್ರಂಟ್ ಕಾಮಗಾರಿಗಳನ್ನು ಈ ಕೆಳಕಂಡಂತೆ ಅಂತಿಮಗೊಳಿಸಲಾಗಿದೆ;

| ಕ್ರ. ಸಂ | ಕಾಮಗಾರಿಯ ಹೆಸರು | ಡಿಪಿಆರ್‌ಮೊತ್ತ ರೂ. (ಕೋಟಿಗಳಲ್ಲಿ) | ಷರಾ |
|---|---|---|---|
| 1 | ಜಲಾಭಿಮುಖ ಪ್ರದೇಶ ಅಭಿವೃದ್ಧಿ (Promonade Development) | 58.61 | ಜಿಲ್ಲಾ ಮತ್ತು ರಾಜ್ಯ ಮಟ್ಟದ CRZ ಅನುಮೋದನೆ ದೊರಕಿರುತ್ತದೆ. |
| 2 | ತಣ್ಣೀರ್‌ಬಾವಿ ಪ್ರದೇಶ ಅಭಿವೃದ್ಧಿ | 7.19 | |
| 3 | ಸುಲ್ತಾನ್ ಭತ್ತೇರಿ ಪ್ರದೇಶ ಅಭಿವೃದ್ಧಿ | 15.22 | |
| 4 | Water Jetty ಉನ್ನತ್ತೀಕರಣ | 9.71 | ಜಿಲ್ಲಾ ಮಟ್ಟದ CRZ ಅನುಮೋದನೆ ದೊರಕಿದ್ದು, ರಾಜ್ಯ ಮಟ್ಟದ CRZ ಸಮಿತಿಯ ಅನುಮೋದನೆ ನಿರೀಕ್ಷಿಸಲಾಗಿದೆ. |
| 5 | ಸುಲ್ತಾನ್ ಭತ್ತೇರಿಯಿಂದ ತಣ್ಣಿರು ಬಾವಿ ಪ್ರದೇಶ ಪಾದಚಾರಿ ಸಮುದ್ರ ನದಿ ಸಂಪರ್ಕ ಸೇತುವೆ ನಿರ್ಮಾಣ | 47.31 | |
| 6 | ನಾಯರ್ ಕುದುರ್ ಬಳಿ ಬಯಲು ರಂಗ ಮಂದಿರ ಹಾಗೂ ವಾಟರ್ ಸ್ಪೋರ್ಟ್ಸ್ ಉದ್ಯಾನವನ ಅಭಿವೃದ್ಧಿ | 39.65 | |
| | ಒಟ್ಟು ಮೊತ್ತ | 177.69 | |

- ಅದರಂತೆ, ಮೇಲಿನ ಆರು ಕಾಮಗಾರಿಗಳ ಯೋಜನಾ ವರದಿಗಳಿಗೆ ಬಾಹ್ಯ ಪರಿಣಿತರನ್ನು ಒಳಗೊಂಡ ರಾಜ್ಯ ಮಟ್ಟದ ತಾಂತ್ರಿಕ ಸಮಿತಿಯ ಶಿಫಾರಸ್ಸಿನೊಂದಿಗೆ ದಿನಾಂಕ:07.03.2022ರ 23ನೇ ಯ ಮಂಗಳೂರು ಸ್ಮಾರ್ಟ್‌ಸಿಟಿ ಲಿಮಿಟೆಡ್ ನಿರ್ದೇಶಕರ ಮಂಡಳಿ ಸಭೆಯಲ್ಲಿ ಆಡಳಿತಾತ್ಮಕ ಅನುಮೋದನೆ ಪಡೆಯಲಾಗಿದೆ. ಆನಂತರ ಟೆಂಡರ್ ಪ್ರಕ್ರಿಯೆ ಕೈಗೊಂಡು ದಿನಾಂಕ:07.03.2022ರ 23ನೇ ಹಾಗೂ ದಿನಾಂಕ:29.03.2022 ರಂದು ನಡೆದ 24ನೇ ಮಂಗಳೂರು ಸ್ಮಾರ್ಟ್‌ಸಿಟಿ ಲಿಮಿಟೆಡ್ ಮಂಡಳಿ ಸಭೆಯಲ್ಲಿ ಟೆಂಡರ್ ಗಳನ್ನು ಅನುಮೋದಿಸಿ, ಗುತ್ತಿಗೆದಾರರಿಗೆ ದಿನಾಂಕ:05.05.2022 ರಂದು ಕಾರ್ಯಾದೇಶ ನೀಡಲಾಗಿದೆ.

- ಪ್ರಸ್ತುತದಲ್ಲಿ ಮೇಲಿನ ಆರು ಯೋಜನೆಗಳ ಪೈಕಿ ಜಲಾಭಿಮುಖ ಪ್ರದೇಶ ಅಭಿವೃದ್ಧಿ (Promonade Development) ಯೋಜನಾ ವರದಿಯಲ್ಲಿ ನೇತ್ರಾವತಿ ಸೇತುವೆಯಿಂದ ಬೋಳಾರ ಸೀ ಫೇಸ್‌ವರೆಗಿನ 2.1 ಕಿ.ಮೀ.ಗಳ ಪೈಲೆಟ್ ಸಮಗ್ರ ಕಾಮಗಾರಿಗೆ ರೂ.70 ಕೋಟಿ (ಜಿಎಸ್‌ಟಿ ಒಳಗೊಂಡಂತೆ) ಅಂದಾಜು ಪಟ್ಟಿಗೆ ಮಂಜೂರಾತಿ ನೀಡಲಾಗಿದೆ. ಅದರಂತೆ ಈ ಯೋಜನೆಯನ್ನು 5 ಉಪ ಕಾಮಗಾರಿಗಳಾಗಿ ವಿಂಗಡಿಸಿ, ರೂ. 51.00 ಕೋಟಿಗಳಿಗೆ (ಜಿಎಸ್ ಟಿ ಹೊರತುಪಡಿಸಿ) ಟೆಂಡರ್ ಕರೆಯಲಾಗಿದ್ದು, ರೂ.49.67 ಕೋಟಿಗಳಿಗೆ (ಜಿಎಸ್‌ಟಿ ಹೊರತುಪಡಿಸಿ) ಕಾರ್ಯದೇಶ ನೀಡಲಾಗಿದೆ ಹಾಗೂ ಜನವರಿ-2024 ರವರೆಗೆ ರೂ.1.79 ಕೋಟಿ ಆರ್ಥಿಕ ಪ್ರಗತಿ ಸಾಧಿಸಲಾಗಿದ್ದು, ಕಾಮಗಾರಿಗಳು ಪ್ರಗತಿಯಲ್ಲಿದೆ.

- ಜಲಾಭಿಮುಖ ಪ್ರದೇಶ ಅಭಿವೃದ್ಧಿ ಕಾಮಗಾರಿಯು ನೇತ್ರಾವತಿ ಸೇತುವೆಯಿಂದ ಬೋಳಾರ ಸೀ ಫೇಸ್‌ವರೆಗಿನ 2.1 ಕಿ.ಮೀ.ಗಳ ಪೈಲೆಟ್ ಸ್ಟೇಜ್ ಕಾಮಗಾರಿಯು ಒಳಗೊಂಡಿರುವ ಅಂಶಗಳ ಸಂಕ್ಷಿಪ್ತ ವಿವರಣೆ ಹಾಗೂ ವೆಚ್ಚ ಈ ಕೆಳಕಂಡಂತಿದೆ:

| **Details of 2.1km Non Motorised Transport, Waterfront Promenade Details** | | |
|---|---|---|
| **Sl. No** | **Description** | **Amount in Crore** |
| 1 | Bio Diversity Park near Netravathi Railway Bridge | 1.83 |
| 2 | Bird Watching Area near Netravathi Railway Bridge | 16.89 |
| 3 | Pathway of 6m width for a stretch of 2.1 Kms | |
| 4 | Cycle Track of 3m width for a stretch of 2.1 Kms | |
| 5 | Landscaping and Park with seating arrangements | 9.29 |
| 6 | Outdoor Gym + Kids Play Area | 0.85 |
| 7 | Cycle Stand+Buggy Point+ Kiosks (Food, Ticket, Security, Haat)+ Boat making experience yard + Entry and Exit Plaza+ Toilet Blocks+ Boat making experience yard+ Pavilion+ Shelters | 5.78 |
| 8 | Pet Park | 0.34 |
| 9 | Board Walk+ South Point | 3.55 |
| 10 | Bolar Sea Face | 2.70 |
| 11 | Open Air Theatre | 0.90 |
| 12 | Electrical Works for entire Promenade | 6.54 |
| 13 | Plumbing works+ STP | 1.00 |
| | Total Amount (Ex. GST) | **49.67** |
| | Total Amount (Including 18% GST) | **58.61** |

- ಈ ಯೋಜನೆಗೆ ಅಗತ್ಯವಿರುವ ಜಿಲ್ಲಾ ಮಟ್ಟದ ಕಡಲ ತೀರ ನಿರ್ವಹಣಾ ಸಮಿತಿ-(District Costal Zone Management Athority-DCAMA) , ಕರ್ನಾಟಕ ರಾಜ್ಯ ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರದ (Karnataka Costal Zone Management Athority-KCAMA) ಅನುಮೋದನೆಯನ್ನು ಪಡೆದಿದ್ದು, ಸರ್ಕಾರಕ್ಕೆ ಸೇರಿದ ಬಂದರು ಇಲಾಖೆಗೆ ಪರವಾನಿಗೆ ನೀಡಿದ ಸ್ಥಳದಲ್ಲಿ ಜಲಾಭಿಮುಖ ಪ್ರದೇಶ ಅಭಿವೃದ್ಧಿ ಯೋಜನೆಯನ್ನು ಪೈಲೆಟ್ ಆಧಾರದ ಮೇಲೆ ಕಾರ್ಯಗತಗೊಳಿಸಲು ಕರ್ನಾಟಕ ಜಲಸಾರಿಗೆ ಮಂಡಳಿ (Karnataka Maritime Board) ಮಂಡಳಿಯಿಂದ ತಾತ್ವಿಕ ಅನುಮೋದನೆಯನ್ನು ಪಡೆದಿದ್ದು, ನಿರ್ಮಾಣದ ನಂತರ ಅದೇ ಇಲಾಖೆಗೆ ಮರು ಹಸ್ತಾಂತರಿಸುವ ಷರತ್ತಿನ ಆಧಾರದ ಮೇಲೆ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ.

- ಅದರಂತೆ, ಮಂಗಳೂರು ಸ್ಮಾರ್ಟ್‌ಸಿಟಿ ಲಿಮಿಟೆಡ್ ಕೇವಲ ಬಂದರು ಇಲಾಖೆಗೆ ಸೇರಿದ ಸರ್ಕಾರಿ ಜಾಗದಲ್ಲಿ ಮಾತ್ರ ಜಲಾಭಿಮುಖ ಪ್ರದೇಶ ಅಭಿವೃದ್ಧಿ ಮೋಟಾರು ರಹಿತ ಸಾರಿಗೆ, ಮನರಂಜನೆ ಹಾಗೂ ಸಾರ್ವಜನಿಕ ಉದ್ಯಾನವನವಾಗಿ ಅನುಷ್ಠಾನಗೊಳಿಸಿ ಬಂದರು ಇಲಾಖೆಗೆ ಹಿಂದಿರುಗಿಸಲಾಗುವುದು

- ದಿನಾಂಕ: 31.05.2023 ರಂದು ಬಂದರು ಇಲಾಖೆಗೆ ಒಳಪಟ್ಟ ಜಾಗದಲ್ಲಿ ಪರವಾನಿಗೆ ಹೊಂದಿದ್ದ ಸಾರ್ವಜನಿಕರೊಂದಿಗೆ ನಡೆದ ಸಭೆಯಲ್ಲಿ ಸದರಿ 2.1ಕಿ.ಮೀ ವ್ಯಾಪ್ತಿಯ ಬಂದರು ಜಾಗವನ್ನು ಉಪಯೋಗಿಸುತ್ತಿರುವ ಜನರನ್ನು ವ್ಯಾಪರ ವಹಿವಾಟುಗಳನ್ನು ನಡೆಸುತ್ತಿರುವ ಜನರನ್ನು ಕರೆದು ಜಲಾಭಿವೃದ್ಧಿ ಯೋಜನೆಯಿಂದ ಅವರ ದೈನಂದಿನ ವ್ಯವಹಾರಕ್ಕೆ ಯಾವುದೇ ಅಡಚಣೆ ಅಗುವುದಿಲ್ಲ ಎಂದು ಚರ್ಚಿಸಿ ಖಾಸಗಿ ಮಾಲಿಕತ್ವದ ಸ್ಥಳದಿಂದ ಜಲಾಭಿಮುಖ ಪ್ರದೇಶಕ್ಕೆ ಸೂಕ್ತ ಮಾರ್ಗವನ್ನು ಕಲ್ಪಿಸಿಕೊಡಲಾಗುವುದೆಂದು ತಿಳಿಸಲಾಗಿದೆ. ಹಾಗೆಯೇ ಕರಾವಳಿ ವೃತ್ತಿನಿರತ (ಶಿಳ್ಳೆಕ್ಯಾತ ಅಲೆಮಾರಿ) 4 ಕುಟುಂಬಕ್ಕೆ ಸೇರಿದ 16 ಜನರನ್ನು ತೆಪ್ಪದೊಂದಿಗೆ ಮೀನುಗಾರಿಕೆ ನಡೆಸಿ ಬರುತ್ತಿದ್ದು, ಅವರಿಗೆ ಸೂಕ್ತ ಪರ್ಯಾಯ ವ್ಯವಸ್ಥೆಯನ್ನು ಕಲ್ಪಿಸಲಾಗುವುದೆಂದು ಆಯುಕ್ತರು ಮಂಗಳೂರು ಮಹಾನಗರ ಪಾಲಿಕೆ ರವರು ತಿಳಿಸಿರುತ್ತಾರೆ ಹಾಗೂ ಬೋಳಾರ ಸೀಫೇಸ್ ಹತ್ತಿರ ಇರುವ ಮೊಗವೀರ ಮಹಿಳಾ ಸಂಘದ ಪಧಾದಿಕಾರಿಗಳೊಂದಿಗೆ, TVS ಫ್ಯಾಕ್ಟರಿ ಹಾಗೂ ಕಾಮನ್‌ವೆಲ್ತ್ ಟೈಲ್ ಫ್ಯಾಕ್ಟರಿ. ಲೋಬೋ ರಿವರ್ ವಿವ್ (ಕಾಸ್ಸಿಯಾ ಟೈಲ್ ಫ್ಯಾಕ್ಟರಿ), ಜೆ.ಎಚ್ ಮೋರ್ಗಾನ್ ಟೈಲ್ ಫ್ಯಾಕ್ಟರಿ, ಎ.ಜೆ ಶೆಟ್ಟಿ, ಕೆನರಾ ಪ್ಲೈವುಡ್, ಮಂಗಳೂರು ಕ್ಲಬ್ ಪಧಾದಿಕಾರಿ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲಾ ಸಹಕಾರಿ ಮೀನು ಮಾರಾಟ ಫೆಡರೇಷನ್ ನಿಯಮಿತ ಪಧಾದಿಕಾರಿಗಳು, ಸಿಟಿ ಬೋಟ್, ಕೆ.ಎನ್ ಬೋಟ್ ಯಾರ್ಡ್, ಮಥಾಯಿಸ್ ಬೋಟ್ ಯಾರ್ಡ್ ರವರೊಂದಿಗೆ ಮಾನ್ಯ ಲೋಕಸಭಾ ಸಂಸದರು, ಮಾನ್ಯ ಶಾಸಕರು ಮಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರ, ಮಹಾಪೌರರು, ಆಯುಕ್ತರು ಮಂಗಳೂರು ಮಹಾನಗೆ ಪಾಲಿಕೆ, ವ್ಯವಸ್ಥಾಪಕ ನಿರ್ದೇಶಕರು ಮಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್, ರವರು ವಿವಿಧ ಹಂತಗಳಲ್ಲಿ ಖಾಸಗಿ ಮಾಲಿಕರೊಂದಿಗೆ ಚರ್ಚಿಸಿದ್ದು, ಸದರಿ ಯೋಜನೆಗೆ ಯಾವುದೇ ಖಾಸಗಿ ಜಾಗದ ಅವಶ್ಯಕತೆ ಇಲ್ಲವೆಂದು ತಿಳಿಸಿರುತ್ತಾರೆ.

- ಮಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ನ ಜಲಾಭಿಮುಖ ಪ್ರದೇಶ ಅಭಿವೃದ್ಧಿ ಕಾಮಗಾರಿ ಕುರಿತು ಬಂದರು ಇಲಾಖೆಗೆ ಸಂಬಂಧಿಸಿದ ಜಾಗದಲ್ಲಿ ಒಟ್ಟು 18 ಮಂದಿ ಪರವಾನಿಗೆ ಹೊಂದಿರುವ ಖಾಸಗಿ ಜನರ ಪೈಕಿ ಒಟ್ಟು 13 ಮಂದಿ ಜಲಾಭಿಮುಖ ಪ್ರದೇಶ ಅಭಿವೃದ್ಧಿ ಯೋಜನೆಗೆ ಪೂರ್ಣ ಸಹಮತಿಯನ್ನು ಸೂಚಿಸಿರುತ್ತಾರೆ.

ಮಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ವತಿಯಿಂದ ನೇತ್ರಾವತಿ ರಿವರ್ ಫ್ರಂಟ್ (ಜಲಾಭಿಮುಖ) ಯೋಜನೆಯನ್ನು ಸರ್ಕಾರದ ಕಾಯ್ದೆ ಹಾಗೂ ನಿಯಮಗಳ ಅನುಸಾರ ಸಕ್ಷಮ ಪ್ರಾಧಿಕಾರಗಳ ಅನುಮೋದನೆಯೊಂದಿಗೆ ಅನುಷ್ಠಾನಗೊಳಿಸಲಾಗುತ್ತಿದ್ದು, ಸದರಿ ಕಾಮಗಾರಿಯು ಜಲಾಭಿಮುಖ ಪ್ರದೇಶದ ಸುಂದರೀಕರಣಗೊಳಿಸುವಲ್ಲಿ ಹಾಗೂ ಆ ಪ್ರದೇಶದ ಮೌಲ್ಯವರ್ಧಿತ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸಲಿದೆ. ಸದರಿ ಯೋಜನೆಯನ್ನು ಕಾಲಮಿತಿಯೊಳಗೆ ಗುಣಮಟ್ಟದೊಂದಿಗೆ ಪೂರ್ಣಗೊಳಿಸಲು ಮಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್‌ಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಲಾಗಿದೆ.

**ಸಂಖ್ಯೆ**: ನಅಇ 38 ಸಿಎಸ್ಎಸ್ 2024

21/02/2024

**(ಬಿ.ಎಸ್.ಸುರೇಶ)**
ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು